

ಓಡಾಡಿದ್ದನ್ನು ಅವಳು ಕಂಡದ್ದಿದೆ. ಅದ್ಯಾರೆಂದು ಪ್ರಶ್ನಿಸುವಾಗ ಅರುಣ ಬಹಳ ಹಗುರವಾಗಿ ಪಕ್ಕದ ಮನೆಯ ಯುವಕನೆಂದಷ್ಟೇ ಹೇಳಿದ್ದ. ಹೆಸರು ರೇವಂತ್ ಅಂತಲೋ, ಹೇಮಂತ್ ಅಂತಲೋ, ಪ್ರಮಥ್ ಅಂತಲೋ ಏನೋ ಹೇಳಿದ್ದ.

ಅವಳು ಏನೋ ನೆನಪಾಗಿ ಕಿಟಕಿಯ ಬಾಗಿಲು ಸರಿಸಿ ನೋಡಿದಳು. ಅವನು ಸಿಟೌಟ್‌ನಲ್ಲಿ ಈಸೀ ಚೇರ್ ಹಾಕಿ ಕುಳಿತು ಇವರ ಮನೆಯತ್ತಲೇ ನೋಡುತ್ತಿದ್ದ. ಆತನಿಗೆ ಏನೋ ಹೇಳುವ ಜರೂರತ್ತಿದೆಯೆನಿಸಿ ಒಮ್ಮೆ ಅವನ ಹತ್ತಿರ ಮಾತಾಡಿ ಬರಲೇ ಎಂದುಕೊಂಡರೂ ಆ ಧೈರ್ಯವಿಲ್ಲದೆ ಕಿಟಕಿಯ ಬಾಗಿಲನ್ನು ಮುಚ್ಚಿ, ಪರದೆ ಹಾಕಿದಳು.

ಅರುಣ ಒಂದು ಮಾತು ಹೇಳದೆ ಹೊರಗೆ ಹೋದದ್ದು ಅವಳಿಗೆ ಬೇಸರ ತರಿಸಿತ್ತು. ವಿಶಾಲ್ ತನ್ನನ್ನು ನಿಂದಿಸಲೆಂದೇ ಎಲ್ಲರೆದುರು ಹಾಗೆ ಅಂದನೇ? ಅಥವಾ ಬೇರಿನ್ನೇನಾದರೂ ಕಾರಣವಿದ್ದೀತೆ? ಆ ಕ್ಷಣಕ್ಕೆ ಮಾತ್ರವಲ್ಲ, ಈಗಲೂ ಅದನ್ನು ಅರಗಿಸಿಕೊಳ್ಳುವುದಕ್ಕೆ ಅವಳಿಂದ ಸಾಧ್ಯವಾಗಲಿಲ್ಲ.

ವಿಶಾಲ್ ಹೇಮಾಳ ದೂರದ ಸಂಬಂಧಿಯೇ. ಹೊಸ ಕಂಪನಿಯೊಂದನ್ನು ಆರಂಭಿಸುವ ಹುಮ್ಮಸ್ಸಿನಿಂದ ಸಂಬಂಧಿಕರನ್ನೇ ತನ್ನ ಕಂಪನಿಗೆ ಆಯ್ಕೆ ಮಾಡಿದುದರ ಹಿಂದೆ ಅವನ ಅಜೆಂಡಾ ಏನಿತ್ತೋ ಯಾರಿಗೂ ಗೊತ್ತಿಲ್ಲ. ವ್ಯವಹಾರದಲ್ಲಿ ಕಟ್ಟಿಕೊಂಡ ಹೆಂಡತಿಯನ್ನೂ ನಂಬಬಾರದೆನ್ನುವ ಮಂತ್ರವನ್ನು ಮೀರಿ ತನ್ನ ವ್ಯವಹಾರಕ್ಕೆ ಸಂಬಂಧಿಕರನ್ನೇ ಗೊತ್ತುಪಡಿಸಿದುದರ ಹಿನ್ನೆಲೆ ಇನ್ನೂ ನಿಗೂಢವೇ.

ಸಂಜೆ ಬೋರ್ಡ್ ಮೀಟಿಂಗ್ ಮುಗಿಸಿ ಅರ್ಜೆಂಟಾಗಿ ಹೇಮಾ ತನ್ನನ್ನು ಭೇಟಿಯಾಗಬೇಕೆಂದು ಹೇಳಿಕಳುಹಿಸಿದ್ದ. ಹೇಮಾಳಿಗೂ ಅವನ ದರ್ದು ಏನು ಎನ್ನುವುದು ತಿಳಿಯಲಿಲ್ಲ. ಮಾಮೂಲಾಗಿ ಅವಳು ಕಂಪನಿಗೆ ಸೇರಿ ಇಷ್ಟು ವರ್ಷಗಳಾದರೂ ಅವನು ಹೀಗೆ ಬರಹೇಳಿದ್ದಿಲ್ಲ.

ಹೇಮಾಳಿಗೆ ಅವನನ್ನು ಭೇಟಿಯಾಗುವವರೆಗೆ ಏನೂ ಅಳುಕಿರಲಿಲ್ಲ. ಆದರೆ ಅವನನ್ನು ಭೇಟಿಯಾದ ಮೇಲೆ ಯಾಕಾಗಿ ಅವನನ್ನು ಭೇಟಿಯಾದೆನೋ ಎಂದು ಹಪಹಪಿಸಿದಳು. ಅದು ಅಷ್ಟಕ್ಕೆ ನಿಂತಿದ್ದರೆ ಅವಳ ಮನಸ್ಸಿಗೇನೂ ನೋವಾಗುತ್ತಿರಲಿಲ್ಲ. ಎಲ್ಲರ ಎದುರು ಅದೇ ವಿಷಯವನ್ನು ತೆಗೆದು ಮಾತಾಡಿದ್ದೇ ಅವಮಾನವಾದಂತಾಗಿ ಅವಳು ತಗ್ಗಿಸಿದ ತಲೆಯನ್ನು ಎತ್ತಿರಲಿಲ್ಲ. ಇದು ಅಂದಿಗೆ ಮುಗಿಯಿತೆಂದರೆ ಮುಗಿಯದ ಧಾರಾವಾಹಿಯಂತೆ ಇನ್ನೂ ಮುಂದುವರಿಯುತ್ತಲೇ ಇದೆ. ಅದ್ಯಾಕೋ ಮತ್ತೆ ಅದೇ ಪ್ರಸ್ತಾವನೆ ಬಂದು ಅವಳು ಮುಜುಗರಕ್ಕೊಳಗಾಗುವಂತಹ ಸನ್ನಿವೇಶ ಎದುರಾಯಿತು. ಯಾರ ಬಳಿಯೂ ಇದನ್ನು ಹೇಳಿಕೊಳ್ಳದ ಅವಳು ಒಳಗೊಳಗೆ ಬೇಯುತ್ತಿದ್ದರೆ, ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥೆ ಸುಗುಣಶೀಲ ಆಕೆಯ ಮುಖದಲ್ಲಿರುವ ದುಃಖವನ್ನು ಕಂಡು ವಿಚಾರಿಸಿದರು.

ಒಟ್ಟು ಸೇರಿದ ಮೋಡಕ್ಕೆ ಮಳೆ ಸುರಿಯಲು ಒಂದು ಚೂರು ಗಾಳಿಯ ಸ್ಪರ್ಶ ಸಾಕೆನ್ನುವಂತೆ ಅವಳೊಳಗೆ ಮಡುಗಟ್ಟಿದ್ದ ದುಃಖದ ಮಡು ಸುಗುಣಶೀಲರ ಮಾತಿಗೆ ಕಣ್ಣೀರಾಗಿ ಇಳಿಯಿತು. ಇದು ಸಹಜವೇ. ಯಾರ ಬಳಿಯಾದರೂ ಹೇಳಿಕೊಳ್ಳಬೇಕೆನ್ನುವ ಧಾವಂತವಿತ್ತು ಅನ್ನುವಂತೆ ಸುಗುಣಶೀಲ ಮೇಡಂನ ಬಳಿ ನಡೆದುದೆಲ್ಲವನ್ನೂ ಒಂದೇ ಗುಕ್ಕಿಗೆ ಹೇಳಿ ಹಗುರಾದಳು.

ಆದರೆ ಅದು ಇನ್ನೊಂದು ಕೋನದಿಂದ ಸಾಗಿ ವಿಶಾಲ್‌ನನ್ನು ಸೇರಿ ದ್ವೇಷ ಸಾಧನೆಯತ್ತ ತುಡಿಯಿತು. ವಿಶಾಲ್ ಮೊದಲೇ ಅವಳ ಮೇಲೆ ದ್ವೇಷ ಕಾರುತ್ತಿದ್ದವನು ಸಿಕ್ಕಿದ್ದೇ ಅವಕಾಶವೆಂದು ತನ್ನ ಸ್ಥಾನಮಾನವನ್ನು ಬದಿಗಿರಿಸಿ ಆಫೀಸಿನ ಒಳಗೆ ನುಗ್ಗಿ ಅವಳ ಟೇಬಲ್‌ನ ಬಳಿ ಬಂದು ಕುಟುಕಿದ. ಮತ್ತದೇ ವಿಷಯ ಅವಳನ್ನು ಗಾಸಿ ಮಾಡಿತು. ವಿಶಾಲ್‌ನ ವಿಷಯವಾಗಲಿ ಸುಗುಣಶೀಲೆಯ ವಿಷಯವಾಗಲಿ ಅವಳು ಯಾರೊಂದಿಗೂ ಹೇಳಲಿಲ್ಲ. ಆಫೀಸ್‌ನವರೆಲ್ಲಾ ಅವಳನ್ನು ತಪ್ಪಿತಸ್ಥೆಯೆನ್ನುವಂತೆ ನೋಡಿದಾಗ, ತನ್ನದಲ್ಲದ ತಪ್ಪಿಗೆ ತೆಪ್ಪಗಿದ್ದರೂ ಸುಮ್ಮನಿರಗೊಡುವುದಿಲ್ಲವೆನ್ನುವುದು ಸ್ಪಷ್ಟವಾಗಿ ಅಳುವೇ ಬಂತು.

ವಿಶಾಲ್ ಇಷ್ಟಕ್ಕೂ ಹತ್ತಿರದ ಸಂಬಂಧಿ. ಹಾಗಿದ್ದೂ ಅವನ ಧೋರಣೆಯನ್ನು ಅವಳು ವಿರೋಧಿಸಿದರೂ ಮುಂದೊಂದು ದಿನ ತನಗೇ ಅದು ಮುಳುವಾಗುವುದೆಂದು ತಿಳಿಯದವಳೇನಲ್ಲ. ವಿಶಾಲ್ ಈ ವಿಷಯದಲ್ಲೇಕೆ ಇಷ್ಟೊಂದು ಕಟುವಾದ? ಯಾರ ಬಳಿಯಾದರೂ ಹೇಳಿ ಹಗುರಾಗಬೇಕೆನ್ನುವುದು ಸಹಜ. ಆ ನಿಜ ಸ್ಥಿತಿಯೇ ಈ ರೀತಿಯ ಆಪಾದನೆಗೆ ಗುರಿಯಾಯಿತೆ?

ಮಾರು ಒಂದು ತಾಸಿನ ಮೇಲೆ ಅರುಣ ಕರೆ ಮಾಡಿದ. ಅವಳಿಗೆ ಹೋದ ಜೀವ ಮರಳಿದಂತಾಯಿತು. ತಾನು ಬರುವಾಗ ತಡವಾಗುತ್ತದೆಯೆಂದು ತನಗೆ ಊಟಕ್ಕೆ ಕಾಯುವುದು ಬೇಡವೆಂದು ಹೇಳಿದ್ದ ಮಾತಿನಲ್ಲಿ ಯಾವುದೇ ಭಾವನೆ ಇರಲಿಲ್ಲ.

ಹೊತ್ತು ಮೀರಿದ್ದರೂ ಅರುಣ ಬರುವುದು ಕಾಣಿಸಲಿಲ್ಲ. ಬರುವಾಗ ತಡವಾಗುತ್ತದೆಯೆಂದನೇ ಹೊರತು ಇಷ್ಟೇ ಹೊತ್ತು ಅಂದಿರಲಿಲ್ಲ. ಕಾಲಿಂಗ್